ಸರ್ಕಾರವು ಅನುದಾನ ಮುಂದುವರಿಸಲು ಮುಖ್ಯಮಂತ್ರಿಗಳು ಈಗಾಗಲೇ ಒಪ್ಪಿದ್ದಾರೆ. ಶೀಘ್ರದಲ್ಲಿಯೇ ಈ ಬಗ್ಗೆ ಸರ್ಕಾರದ ಆದೇಶವನ್ನು ಹೊರಡಿಸಲಾಗುವುದು.

ಶ್ರೀ ವೇದಾಂತ ಹೆಬ್ಬಾರ್.—ಮಾನ್ಯ ಅಧ್ಯಕ್ಷರೇ, ಈಗ 2 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಕಳೆದ ಮೂರು ತಿಂಗಳುಗಳಿಂದ ರಾಜ್ಯದಲ್ಲಿರುವ ಸೂಪಾರು ಳಿರ ನೌಕರರಿಗೆ ಸಂಬಳ ಸಿಕ್ಕಿಲ್ಲ. ಆದುದರಿಂದ ಬಿಡುಗಡೆ ಮಾಡಲು ಒಪ್ಪಿರತಕ್ಕಂಥ 2 ಲಕ್ಷ ರೂಪಾಯಿಗಳ ಹಣವನ್ನು ತತ್‌ಕ್ಷಣ ಬಿಡುಗಡೆ ಮಾಡಬೇಕು, ಮತ್ತು ಬಾಕಿ ಉಳಿದಿರುವ ಅನುದಾನವನ್ನು ಕೂಡ ಕೂಡಲೇ ಬಿಡುಗಡೆ ಮಾಡಬೇಕು. ಈ ಒಂದು ಭಾರತ ಸೇವಾದಳವನ್ನು ಮಾನ್ಯ ಹರ್ಡೀಕರ್‌ರವರು ಮಹಾತ್ಮಗಾಂಧೀಜಿಯವರ ತತ್ವವನ್ನು ಅನುಸರಿಸಿ ಸ್ಥಾಪನೆ ಮಾಡಿದ್ದರು. ಅಂಥ ಒಂದು ಮಹಾನ್ ಸಂಸ್ಥೆ ಅವಾಗಿದೆ. ಅದಕ್ಕೆ ಅನುದಾನವನ್ನು ಕೊಡುವುದರಿಂದ ಒಂದು ಒಳ್ಳೆಯ ಕೆಲಸ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ತತ್‌ಕ್ಷಣವೇ ಹಣವನ್ನು ಬಿಡುಗಡೆ ಮಾಡಿ ಅಲ್ಲಿರುವ ನೌಕರರಿಗೆ ಸಂಬಳ ದೊರಕುವಂತೆ ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ ಎಲ್. ಶಂಕರ್.—ಅಧ್ಯಕ್ಷರೇ, ೪-೫-೧೯೮೨ ರ ಸರಕಾರಿ ಆದೇಶದಲ್ಲಿ ಅನುದಾನವನ್ನು ಆ ಸಂಸ್ಥೆಗೆ ನಿಲ್ಲಿಸಬೇಕೆಂದು ಆದೇಶ ಹೊರಾಟ ಕಾರಣದಿಂದಾಗಿ ಅನುದಾನವನ್ನು ಕೊಡಲಿಕ್ಕೆ ಆಗಲಿಲ್ಲ. ಬಾಕಿ ಇರತಕ್ಕಂಥ ಹಣದಲ್ಲಿ ೩ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಆದೇಶ ಹೊಗಿದೆ. ಈ ವಾರದಲ್ಲಿ ಆ ಹಣವು ಬಿಡುಗಡೆ ಆಗುತ್ತದೆ ಎಂದು ಹೇಳಬಯಸುತ್ತೇನೆ.

೧೧. ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವ ಸಂದರ್ಭದಲ್ಲಿ ೭೫ ಲಕ್ಷ ರೂಪಾಯಿ ನಷ್ಟವಾಗಿರುವುದು

ಶ್ರೀ ಆರ್. ವೆಂಕಟರಾಮಯ್ಯ,—ಮಾನ್ಯ ಅಧ್ಯಕ್ಷರೇ, ರಾಜಾಸ್ಥಾನದಲ್ಲಿ ಎನ್. ಜಿ. ಇ. ಎಫ್. ಸಂಸ್ಥೆಯವರು ರೆಕ್ಟಿಫೈಯರ್ ಸ್ಥಾಪಿಸುವಂತಹ ಸಂದರ್ಭದಲ್ಲಿ ಕೆಟ್ಟ ತಂತ್ರಜ್ಞಾನದಿಂದಾಗಿ ೭೫ ಲಕ್ಷ ರೂಪಾಯಿಗಳ ನಷ್ಟವಾಗಿರುವುದರ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ

ಅಧ್ಯಕ್ಷರು —ಮಾನ್ಯ ಲಕ್ಷ್ಮೀಸಾಗರ್‌ರವರೇ ಮಾನ್ಯ ವೆಂಕಟರಾಮಯ್ಯನವರ ಕಾಲಿಂಗ್ ಅಟೆನ್‌ಷನ್‌ಗೆ ಯಾರು ಉತ್ತರ ಕೊಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾಳೆ ಇಲ್ಲವೇ ಆಮೇಲೆ ಇದನ್ನು ತೆಗೆದುಕೊಳ್ಳಿ ಸಂಬಂಧಪಟ್ಟ ಮಂತ್ರಿಗಳು ಆ ಮನೆಗೆ ಹೋಗಿದ್ದಾರೆ

ಅಧ್ಯಕ್ಷರು.—ಉತ್ತರ ಕೊಡಿಸುತ್ತೇನೆ. ಈಗ ೩೫೪ ಅನ್ನು ತೆಗೆದುಕೊಳ್ಳೋಣ.

MATTER UNDER RULE 334

Disturbed Power supply to farmers in the State

SRI R. VENKATARAMAIAH.—Sir, in Karnataka there is lot of inconvenience caused to the public at large due to disturbed power supply, through the agriculturists are told that they will get power from 6 p.m to 11 a.m. and 12 p.m. to 6 p.m. and from 6 p.m to 6 a.m. There is always break of power supply every hour during the time. The KEB officials at their level will say it is due to fault of persons at Bangalore or at some place. Even in residential installations we are facing the same trouble. Hence, I call upon

the Minister for KEB to rectify these defects and assure supply at promised hours.

SRI LAKSHMINARASIMHAIAH (Minister of State for Power).—Sir, ಮಾನ್ಯ ವೆಂಕಟರಾಮಯ್ಯನವರು ಹಿಂದಿನ ಸಭೆಯಲ್ಲಿ ಕೂಡ ಈ ಪ್ರಶ್ನೆಯನ್ನು ಕೇಳಿದ್ದರು, ಈಗ ಈ ಕೆಳಕಂಡ ಉತ್ತರವನ್ನು ಕೊಡಬಯಸುತ್ತೇನೆ.

As there is shortage of power in the State due to failure of moonson last year, cut on consumption by all categories of consumers (except IP sets and Electric Crematorium) is imposed. Load Shedding for 6 hours in day time is arranged in rural feeders predominant with IP set loads (since these are exempted from cut on consumption) to conserve some energy. The load shedding time will be 6 a.m. to 2 p.m. on one day and from 9 a.m. to 5 p.m. on the next day. This can also be modified according to local requirement.

Load shedding for two hours (one-and-a-half hour day time and half-an-hour during evening peak hours) is also done in Urban areas though almost all consumers are subjected to energy cet.

Power is made available for farmers for 16 Hours a day. A part from this, there will be no pre-arranged interruptions. However, if there are any interruptions, they are unforeseen and due to tripping of lines on fault or opening of feeders due to overloading and outages of generators such as Raichur Plant, emergency load shedding has to be done because of loss of generation.

Efforts are being made to minimise unforeseen interruptions and arrange uninterrupted power supply during assured period.

೨) ವೀರಾಜಪೇಟೆಯ ಬಾಡಗ ಗ್ರಾಮಕ್ಕೆ ವಿದ್ಯುತ್ ಒದಗಿಸುವುದಲ್ಲಿ ವಿಳಂಬವಾಗಿರುವುದು

ಶ್ರೀಮತಿ ಸುಮ್ಮಾ ವಸಂತ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯಲ್ಲಿ ಗ್ರಾಮೀಣ ವಿದ್ಯುದ್ದೀಕರಣಕ್ಕೆ ೮೨-೮೩ನೇ ಸಾಲಿನಲ್ಲಿ ಆರಿಸಿದ ಗ್ರಾಮಗಳ ಪೈಕಿ ವೀರಾಜಪೇಟೆಯ ಬಾಡಗ ಗ್ರಾಮವನ್ನು ಸೇರಿಸಲಾಗಿತ್ತು. ಎಲ್ಲಾ ಕಡೆಗಳಂತೆ ಇಲಾಖೆಯವರು ಇಲ್ಲಿಯೂ ಕೆಲಸವನ್ನು ಭರದಿಂದಲೇ ಆರಂಭಿಸಿದರು. ಆದರೆ ೬ ತಿಂಗಳಾದ ನಂತರವೂ ಈ ಕೆಲಸ ಪೂರ್ಣವಾಗಲಿಲ್ಲ. ಕಳೆದ ವರ್ಷ ರುದ್ರಗುಪ್ಪೆ ಬಾಡಗ ರಸ್ತೆಯ ಳಿನೇ ಕಿ.ಮೀ. ಬಳಿ ವಿದ್ಯುತ್ ಕಂಬ ಮುರಿದು ಬಿದ್ದಿದ್ದು ಇಲಾಖೆಯ ವಾಹನಗಳು ಹಾಗೂ ಸಿಬ್ಬಂದಿಗಳು ಅದೇ ರಸ್ತೆಯಲ್ಲಿ ಓಡಾಡುತ್ತಿದ್ದರೂ ಬಿದ್ದಿರುವ ಕಂಬ ಅವರ ದೃಷ್ಟಿಗೆ ಬಿದ್ದಿಲ್ಲದಿರುವುದು ದುರದೃಷ್ಟಕರ. ವಿದ್ಯುದ್ದೀಕರಣ ಕೆಲಸ ಅರ್ಧಂಬರ್ಧ ನಡೆದಿದೆ. ಬಾಡಗ-ಪೊದಕೇರಿ ಭಾಗಗಳಿಗೆ ವಿದ್ಯುತ್ ಒದಗಿಸಲಾಗಿದ್ದು ಒಳಭಾಗದ ಬಾಡಗ ಬಗ್ಗೆ ಕೊಕ್ಕ ಹಾಗೂ ೨ನೇ ರುದ್ರಗುಪ್ಪಾಗಳಿಗೆ ಇನ್ನೂ ವಿದ್ಯುತ್ ಒದಗಿಸಿರುವುದಿಲ್ಲ. ಬಾಡಗ ಶಾಲೆಯಿಂದ ಒಂದು ಕಿ.ಮೀ. ದೂರದಲ್ಲಿರುವ ಅರಣ್ಯ ಇಲಾಖಾ ಟೀ ತೋಟದವರಿಗೆ ವಿದ್ಯುತ್ ಒದಗಿಸಲಾಗಿದ್ದು ಅಲ್ಲಿಂದ ಮುಂದಕ್ಕೆ ಕೈ ಬಿಡಲಾಗಿದೆ. ಕಂಬ ಹಾಕಲು ಗುಂಡಿ ತೋಡಿದ್ದು ಮಳೆಯಿಂದ ಅವುಗಳು ಮುಚ್ಚಿ ಹೋಗಿವೆ. ಈ ಎಲ್ಲಾ ಕೆಲಸಗಳನ್ನು ಒಬ್ಬ ಕಂಟ್ರಾಕ್ಟದಾರನಿಗೆ ವಹಿಸಲಾಗಿದ್ದು ಯಾವ ಕೆಲಸವೂ ಎರಡು ವರ್ಷಗಳಿಂದ ಆಗಿರುವುದಿಲ್ಲ. ಕಂಟ್ರಾಕ್ಟರ್ ಅನ್ನು ವಿಚಾರಿಸಿದರೆ ಇಲಾಖೆಯವರ ಮೇಲೆ ಹೇಳುವುದು. ಇಲಾಖೆಯವರನ್ನು ವಿಚಾರಿಸಿದರೆ ಕಂಟ್ರಾಕ್ಟರ್ ಮೇಲೆ ಹೇಳುವುದು, ಇಲಾಖೆ